# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## 88ನೇ ಸಾಮಾನ್ಯ ಸಿಂಡಿಕೇಟ್ ಸಭೆ
## ಹಾಗೂ 2024ನೇ ಸಾಲಿನ 5ನೇ ಸಭೆಯ
## ನಡಾವಳಿಗಳು

ದಿನಾಂಕ : ಬುಧವಾರ, 11-09-2024

ಸಮಯ : ಪೂರ್ವಾಹ್ನ 11:00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ, ರಾಚವಿವಿ
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **88ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2024ನೇ ಸಾಲಿನ 5ನೇ ಸಭೆಯನ್ನು** ದಿನಾಂಕ 11 ಸೆಪ್ಟೆಂಬರ್ 2024 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಸಿ. ಎಂ. ತ್ಯಾಗರಾಜ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. | ಡಾ. ಎಸ್. ಬಿ. ಉಕಲಿ | ಸದಸ್ಯರು |
| 6. | ಡಾ. ಎಸ್. ಎ. ಪತಂಗಿ | ಸದಸ್ಯರು |
| 7. | ಡಾ. ಶಾರದಾಮಣಿ ಎಸ್ ಹುಣಶಾಳ | ಸದಸ್ಯರು |
| 8. | ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 9. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 10. | ಶ್ರೀ. ರಫೀ ಭಂಡಾರಿ | ಸದಸ್ಯರು |
| 11. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 12. | ಶ್ರೀ. ಮಹಾಂತೇಶ ಕಂಬಾರ | ಸದಸ್ಯರು |
| 13. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 14. | ಶ್ರೀ ರವೀಂದ್ರನಾಥ ಕದಮ್, (ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 15. | ಶ್ರೀ. ಸಂತೋಷ ಕಾಮಗೌಡ (ಕೆ.ಎ.ಎಸ್.(ಹಿರಿಯ ಶ್ರೇಣಿ)) | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 6. | ಪ್ರೊ. ಸಿದ್ಧಗೌಡ ಪಾಟೀಲ್ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156**

**ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು**

**ವಿಷಯ:** ದಿನಾಂಕ 11 ಸೆಪ್ಟೆಂಬರ್ 2024 ರಂದು ಸಿಂಡಿಕೇಟ್ ಸಭಾಂಗಣ ಇಲ್ಲಿ ನಡೆದ ವಿಶ್ವವಿದ್ಯಾಲಯದ 88ನೇ ಹಾಗೂ 2024ನೇ ಸಾಲಿನ 5ನೇ ಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 02.09.2024.

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 02.09.2024.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 88ನೇ ಹಾಗೂ 2024 ನೇ ಸಾಲಿನ 5 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 11.09.2024 ರಂದು ಪೂರ್ವಾಹ್ನ 11.00 ಗಂಟೆಗೆ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಸರ್ಕಾರದಿಂದ ಹೊಸದಾಗಿ ನಾಮನಿರ್ದೇಶನಗೊಂಡ ಸದಸ್ಯರುಗಳಾದ ಡಾ. ಕಾವೇರಿ. ಎಚ್. ಎಂ., ಶ್ರೀ ರವೀಂದ್ರ, ಶ್ರೀ. ಮಲ್ಲಪ್ಪ ನಾಯ್ಕರ, ಶ್ರೀ ರಫೀ ಭಂಡಾರಿ, ಡಾ. ಮಾರುತಿ ಹೆಚ್. ಮುಂಡರಗಿ, ಶ್ರೀ ಮಹಾಂತೇಶ ಕಂಬಾರ ಮತ್ತು ಡಾ. ಎಸ್. ಎಸ್. ಅಂಗಡಿ ಇವರುಗಳಿಗೆ ಹೂಗುಚ್ಛ ನೀಡುವುದರ ಮೂಲಕ ಸಭೆಗೆ ಬರಮಾಡಿಕೊಳ್ಳಲಾಯಿತು. ನಂತರ, ಕುಲಸಚಿವರು ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳು ಮತ್ತು ಹಾಜರಿದ್ದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 09.09.2010 ರಲ್ಲಿ ಘೋಷಣೆಯಾಗಿದ್ದು, ಪ್ರಸ್ತುತ 09.09.2024 ರಂದು 14 ವರ್ಷಗಳ ಸುದೀರ್ಘ ಅವಧಿಯನ್ನು ಪೂರ್ಣಗೊಳಿಸಿರುತ್ತದೆ. ಕಾರಣ, ಇದೇ ತಿಂಗಳು 17.09.2024 ರಂದು "ಸಂಸ್ಥಾಪನಾ ದಿನಾಚರಣೆ" ಆಚರಿಸಲು ನಿರ್ಣಯಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಸನ್ಮಾನ್ಯ ಶ್ರೀ ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವರು, ಕರ್ನಾಟಕ ಸರ್ಕಾರ, ಇವರು ಕಾರ್ಯಕ್ರಮದ ಉದ್ಘಾಟಕರಾಗಿ ನ್ಯಾ. ಎಚ್. ಎನ್. ನಾಗಮೋಹನ್‌ದಾಸ್ ಮತ್ತು ಕು. ಪ್ರಿಯಾಂಕಾ ಸತೀಶ ಜಾರಕಿಹೊಳಿ, ಮಾನ್ಯ ಲೋಕಸಭಾ ಸದಸ್ಯರು ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸುತ್ತಿದ್ದಾರೆ. ಕಾರಣ, ಈ ಕಾರ್ಯಕ್ರಮದಲ್ಲಿ ಎಲ್ಲ ಸದಸ್ಯರುಗಳು ಭಾಗವಹಿಸಿ ಕಾರ್ಯಕ್ರಮದ ಶೋಭೆ ಹೆಚ್ಚಿಸಲು ಕೋರಿದರು.

ಪ್ರಾರಂಭದ ದಿನಗಳಲ್ಲಿ ಸಂಸ್ಥಾಪಕ ಕುಲಪತಿಗಳಾದ ದಿವಂಗತ ಪ್ರೊ. ಬಿ. ಆರ್. ಅನಂತನ್ ಇವರು ಮಾನವ ಸಂಪನ್ಮೂಲಕ್ಕೆ ಹೆಚ್ಚಿನ ಆದ್ಯತೆ ನೀಡಿ ಸುಮಾರು 200 ಕ್ಕೂ ಹೆಚ್ಚು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಾಡಿರುತ್ತಾರೆ. ಎರಡನೇ ಅವಧಿಯ ಕುಲಪತಿಗಳಾದ ಪ್ರೊ. ಶಿವಾನಂದ ಹೊಸಮನಿ ಇವರು ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಇರುವ ಅಂದಾಜು 169 ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ವಿಶ್ವವಿದ್ಯಾಲಯದ ಸ್ವಾಧೀನಕ್ಕೆ ಪಡೆದುಕೊಳ್ಳಲು ಅನೇಕ ಬಾರಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹಂತದಲ್ಲಿ ಪ್ರಯತ್ನ ಮಾಡಿರುತ್ತಾರೆ ಹಾಗೂ ಮೂರನೆ ಅವಧಿಯ ಕುಲಪತಿಗಳಾದ ಪ್ರೊ. ಎಂ. ರಾಮಚಂದ್ರಗೌಡ ಇವರ ಅವಧಿಯಲ್ಲಿ ಹಿರೇಬಾಗೇವಾಡಿ–ಹಾಲಗಿಮರ್ಡಿ ಗ್ರಾಮದಲ್ಲಿ ಸರ್ಕಾರದಿಂದ ಸುಮಾರು 126.27 ಎಕರೆ ಜಮೀನು ಮಂಜೂರಾಗಿರುತ್ತದೆ. ಪ್ರಸ್ತುತ ತಮ್ಮ ಅವಧಿಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ, ಬೋರವೆಲ್ ಅಳವಡಿಕೆ, ರಸ್ತೆ

ಕಾಮಗಾರಿ, ವಿದ್ಯುತ್ ಕಾಮಗಾರಿ, ಇನ್ನಿತರೇ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇದರಲ್ಲಿ ಕೆಲವು ಶೈಕ್ಷಣಿಕ ವಿಭಾಗಗಳ ಸಿವಿಲ್ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು ಶೀಘ್ರದಲ್ಲಿಯೇ ಕೆಲವು ವಿಭಾಗಗಳನ್ನು ಹೊಸ ಕಟ್ಟಡಗಳಲ್ಲಿ ಸ್ಥಳಾಂತರಿಸಲು ಯೋಜಿಸಲಾಗಿದೆ. ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ(PM-USHA) ಯೋಜನೆಯಡಿಯಲ್ಲಿ ಸರ್ಕಾರದಿಂದ 100 ಕೋಟಿಗಳ ಅನುದಾನ ಮಂಜೂರಾಗಿದ್ದು ಇದರಡಿ ಕಟ್ಟಡ ಕಾಮಗಾರಿ ಮತ್ತು ವೈಜ್ಞಾನಿಕ ಉಪಕರಣಗಳನ್ನು ಖರೀದಿಸುವ ಪ್ರಕ್ರಿಯೆ ಕೂಡ ಪ್ರಗತಿಯಲ್ಲಿದೆ ಎಂದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ರಾಜ್ಯದ ದೊಡ್ಡ ವಿಶ್ವವಿದ್ಯಾಲಯವಾಗಿದ್ದು 22 ಸ್ನಾತಕೋತ್ತರ ವಿಭಾಗಗಳು, 4 ಅಧ್ಯಯನ ಪೀಠಗಳು, ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಯಲ್ಲಿಯ ಒಟ್ಟು 352 ಮಹಾವಿದ್ಯಾಲಯಗಳು, ಅಂದಾಜು 1,80,000 ವಿದ್ಯಾರ್ಥಿಗಳು, ನುರಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಹೊಂದಿದೆ. ಸಿಬ್ಬಂದಿಗಳ ಕೌಶಲ್ಯ ಹೆಚ್ಚಿಸಲು ಅಜೀಂ ಪ್ರೇಮಜಿ ಸಂಸ್ಥೆಯವರೊಂದಿಗೆ ಒಡಂಬಡಿಕೆ(MoU) ಮಾಡಿಕೊಳ್ಳಲಾಗಿದೆ ಹಾಗೂ ಹಲವಾರು Workshop, Seminar, Conference ಗಳನ್ನು ಈಗಾಗಲೇ ಹಮ್ಮಿಕೊಂಡಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಆಂತರಿಕ ಸಂಪನ್ಮೂಲವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು Digital Publishing Desk, Education App, Skill Development ಸೇವೆಗಳನ್ನು ಪ್ರಾರಂಭಿಸುತ್ತಿದೆ ಎಂದು ತಿಳಿಸಿ ವಿಶ್ವವಿದ್ಯಾಲಯದ ಕುರಿತು ಸಂಕ್ಷಿಪ್ತ ವಿವರಣೆಯನ್ನು ಮಾನ್ಯ ಕುಲಪತಿಗಳು ಸಭೆಗೆ ನೀಡಿದರು.

ಮುಖ್ಯವಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರಸ್ತುತ ಇರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ ಇಲ್ಲಿ 50 ಎಕರೆ ಜಮೀನನ್ನು ಉಳಿಸಿಕೊಳ್ಳಲು ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಹುದ್ದೆಗಳ ಸೃಜನೆ ಮತ್ತು ಮಂಜೂರಾಗಿ ಖಾಲಿ ಇರುವ ವಿವಿಧ ವೃಂದದ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರಕಾರಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸರಕಾರದ ಅನುಮೋದನೆಯನ್ನು ಪಡೆಯಲು ಎಲ್ಲ ಸದಸ್ಯರುಗಳ ಪಾತ್ರ ಮಹತ್ವದ್ದಾಗಿರುತ್ತದೆ ಎಂದರು. ಮುಂದುವರೆದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 12ನೇ ವಾರ್ಷಿಕ ಘಟಿಕೋತ್ಸವವು ಸೆಪ್ಟೆಂಬರ್/ಅಕ್ಟೋಬರ್-2024 ರ ಮಾಹೆಯಲ್ಲಿ ಜರುಗಲಿದ್ದು ಇದಕ್ಕೆ ಸಂಬಂಧಿಸಿದಂತೆ ರಾಜಭವನ, ಬೆಂಗಳೂರು ಇವರಿಂದ ಘಟಿಕೋತ್ಸವದ ಕುರಿತು ಬಂದಿರುವ ಪತ್ರದ ಮಾಹಿತಿಯನ್ನು ಸಭೆಗೆ ನೀಡಿ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಎಲ್ಲ ಸದಸ್ಯರ ಸಲಹೆ, ಸಹಕಾರ, ಮಾರ್ಗದರ್ಶನ ಅಗತ್ಯ ಎಂದರು.

ತದನಂತರ ಕುಲಸಚಿವರು ಮತ್ತೊಮ್ಮೆ ಸ್ವಾಗತಿಸಿ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 88 ನೇ ಹಾಗೂ 2024 ನೇ ಸಾಲಿನ 5 ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 11-09-2024 ರಂದು ಕೈಗೊಂಡ ತೀರ್ಮಾನಗಳು.**

| ಕ್ರ. ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2024/09/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | **ದಿನಾಂಕ 21-08-2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿ ಅನುಮೋದನೆ ನೀಡಿತು.** |
| 02 | 2024/09/02 | ಬೋಧಕ ಸಿಬ್ಬಂದಿಗಳಿಗೆ ಪಾಸಪೋರ್ಟ್ ಸಲುವಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು(NoC) ನೀಡಲಾಗಿರುವ ವಿಷಯಕ್ಕೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಡಾ. ಫಯಾಜ ಅಹ್ಮದ ಇಳಕಲ್, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ, ಸ್ನಾತಕೋತ್ತರ ಕೇಂದ್ರ, ರಾಚವಿ, ವಿಜಯಪುರ ಮತ್ತು ಡಾ. ದೇವತಾ ಗಸ್ತಿ, ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ರಾಚವಿ, ಬೆಳಗಾವಿ ಇವರುಗಳಿಗೆ ಪಾಸಪೋರ್ಟ್ ಸಲುವಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು(NoC) ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** |

<table>
<tr><td>03</td><td>2024/09/03</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು(NoC) ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಪ್ರೊ. ಬಸವರಾಜ ಪದ್ಮಶಾಲಿ, ಹಿರಿಯ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ರಾಚವಿ, ಬೆಳಗಾವಿ ಇವರಿಗೆ Indira Gandhi National Open University(IGNOU), New Delhi ಇಲ್ಲಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು(NoC) ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು</td></tr>
<tr><td>04</td><td>2024/09/04</td><td>ಶ್ರೀ ರೋಹಿತ ಆಳಂದೆ, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ದೂರ ಶಿಕ್ಷಣದ ಮೂಲಕ ಬಿ.ಎ. ಪದವಿಯನ್ನು ಪಡೆಯಲು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು(NoC) ನೀಡಿರುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಅನುಕಂಪದ ಆಧಾರದ ಮೇಲೆ ನೇಮಕಗೊಂಡ ಶ್ರೀ ರೋಹಿತ ಆಳಂದೆ, ದ್ವಿತೀಯ ದರ್ಜೆ ಸಹಾಯಕರು, ಸಾಮಾನ್ಯ ಆಡಳಿತ ವಿಭಾಗ, ರಾಚವಿ, ಬೆಳಗಾವಿ ಇವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ದೂರ ಶಿಕ್ಷಣದ ಮೂಲಕ ಬಿ.ಎ. ಪದವಿಯನ್ನು ಪಡೆಯಲು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು(NoC) ನೀಡಿರುವ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>05</td><td>2024/09/05</td><td>ಹಣಕಾಸು ಅಧಿಕಾರಿಗಳು ಇವರಿಗೆ ಈಗಿರುವ ರೂ. 3000/-ಗಳ ಗೃಹ ಪರಿಚಾರಕೆ ಭತ್ಯೆಯನ್ನು ಹೆಚ್ಚಿಸಿ, ಮಾಸಿಕ ಭತ್ಯೆ ರೂ.5000/-ಗಳನ್ನು ನೀಡುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಸರ್ಕಾರದ ಆದೇಶ ಸಂ: ಸಿಆಸುಇ 232 ಸಿಸೇನಿ 2011, ಬೆಂಗಳೂರು ದಿನಾಂಕ: 22.10.20211 ರನ್ವಯ ಸರ್ಕಾರದ ಅಧಿಕಾರಿ ವರ್ಗದವರಿಗೆ ನೀಡುವಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆಯಲ್ಲಿರುವ ಅಧಿಕಾರಿಗಳಿಗೆ ಗೃಹ ಪರಿಚಾರಿಕೆ ಭತ್ಯೆ(Sumptuary allowance) ನ್ನು ಈ ಕೆಳಗಿನಂತೆ ಈಗಾಗಲೇ ನೀಡಲಾಗುತ್ತಿದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು.
<table>
<tr><th>ಸಂ</th><th>ಅಧಿಕಾರಿ ವರ್ಗ</th><th>ಗೃಹ ಪರಿಚಾರಕೆ ಭತ್ಯೆ ಮಾಸಿಕ ರೂ</th></tr>
<tr><td>1</td><td>ಮಾನ್ಯ ಕುಲಪತಿಗಳು</td><td>ರೂ. 7,000/-</td></tr>
<tr><td>2</td><td>ಕುಲಸಚಿವರು(ಆಡಳಿತ)</td><td>ರೂ. 6,000/-</td></tr>
<tr><td>3</td><td>ಕುಲಸಚಿವರು(ಮೌಲ್ಯಮಾಪನ)</td><td>ರೂ. 5,000/-</td></tr>
<tr><td>4</td><td>ಹಣಕಾಸು ಅಧಿಕಾರಿಗಳು</td><td>ರೂ. 3,000/-</td></tr>
</table>
ಮುಂದುವರೆದು, ಕುಲಸಚಿವರು(ಮೌಲ್ಯಮಾಪನ) ಇವರಿಗೆ ನೀಡಲಾಗುತ್ತಿರುವ ಗೃಹ ಪರಿಚಾರಿಕೆ ಭತ್ಯೆ ರೂ. 5,000/-ಗಳಂತೆ ಹಣಕಾಸು ಅಧಿಕಾರಿಗಳು ಇವರಿಗೂ ಕೂಡ ರೂ. 3,000/- ರಿಂದ ಹೆಚ್ಚಿಸಿ ರೂ. 5,000/-ಗಳಷ್ಟು ಮಂಜೂರು ಮಾಡಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.</td></tr>
<tr><td>06</td><td>2024/09/06</td><td>ಶ್ರೀ ಸಮರ್ಥ ಸಿದ್ದಪ್ಪ ಹಲಸಗಿ, ದ್ವಿತೀಯ ದರ್ಜೆ ಸಹಾಯಕರು, ಐ.ಕ್ಯೂ.ಎ.ಸಿ. ವಿಭಾಗ ಇವರಿಗೆ ಬಿ.ಇ. ಇಂಜಿನೀಯರಿಂಗ್ ಪದವಿಯ 4ನೇ ವರ್ಷವನ್ನು ಪೂರ್ಣಗೊಳಿಸಲು ಅಸಾಧಾರಣ ರಜೆ ಮಂಜೂರು ಮಾಡುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಶ್ರೀ ಸಮರ್ಥ ಸಿದ್ದಪ್ಪ ಹಲಸಗಿ, ದ್ವಿತೀಯ ದರ್ಜೆ ಸಹಾಯಕರು, ಐ.ಕ್ಯೂ.ಎ.ಸಿ. ವಿಭಾಗ ಇವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಯೋಜಿತ ಗೋಗಟೆ ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಬಿ.ಇ. ಇಂಜಿನಿಯರಿಂಗ್ ಪದವಿಯ 3ನೇ ವರ್ಷವನ್ನು ಪೂರ್ಣಗೊಳಿಸಿದ್ದು, 4ನೇ ವರ್ಷಕ್ಕೆ ಪ್ರವೇಶ ಪಡೆದ ನಂತರ ಅನುಕಂಪದ ಆಧಾರದ ಮೇರೆಗೆ ವಿಶ್ವವಿದ್ಯಾಲಯದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕಗೊಂಡಿರುತ್ತಾರೆ. ಅದರಂತೆ, ಸದರಿಯವರು ವಿಶ್ವವಿದ್ಯಾಲಯದ ಕರ್ತವ್ಯಕ್ಕೆ ಹಾಜರಾಗಿದ್ದು, ಅವರ ಪರೀವೀಕ್ಷಣಾ ಅವಧಿಯು ದಿನಾಂಕ: 26.02.2024 ರಂದು ಘೋಷಣೆಯಾಗಿರುತ್ತದೆ. ಪ್ರಸ್ತುತ ಸದರಿಯವರು ತಾವು ಮೊಟಕುಗೊಳಿಸಿದ ಬಿ.ಇ. ಇಂಜಿನಿಯರಿಂಗ್ ಪದವಿಯ 4ನೇ ವರ್ಷವನ್ನು(07 ಮತ್ತು 08 ನೇ ಸೆಮಿಸ್ಟರ್) ಪೂರ್ಣಗೊಳಿಸಲು ಇಚ್ಛಿಸಿದ್ದು, ಪದವಿಯನ್ನು ಪೂರ್ಣಗೊಳಿಸಲು ಅಸಾಧಾರಣ ರಜೆ ಮಂಜೂರು ಮಾಡಲು ವಿನಂತಿಸಿರುವ ವಿಷಯವನ್ನು ಮಂಡಿಸಲಾಯಿತು.<br>
ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು, ಕೆ.ಸಿ.ಎಸ್.ಆರ್. ನಿಯಮಾವಳಿ ನಿಯಮ 117 (1) (ಎ) ರಂತೆ ಸದರಿಯವರಿಗೆ ದಿನಾಂಕ: 09.09.2024 ರಿಂದ ಒಂದು ವರ್ಷದ ಅವಧಿಗೆ ವೇತನ ರಹಿತ (Without Pay) ಅಸಾಧಾರಣಾ ರಜೆ(Extra Ordinary Leave) ಮಂಜೂರು ಮಾಡಲು ತೀರ್ಮಾನಿಸಿತು.</td></tr>
</table>

| | | |
|---|---|---|
| 07 | 2024/09/07 | ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದ ಪ್ರವೇಶ ಶುಲ್ಕ ಪರಿಷ್ಕರಣಾ ಹಾಗೂ ಏಕರೂಪದ ಪರೀಕ್ಷಾ ಸಂಭಾವನೆ ನಿಗದಿಪಡಿಸುವ ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದ ಪ್ರವೇಶ ಶುಲ್ಕ ಪರಿಷ್ಕರಣಾ ಹಾಗೂ ಏಕರೂಪದ ಪರೀಕ್ಷಾ ಸಂಭಾವನೆ ನಿಗದಿಪಡಿಸುವ ಸಮಿತಿಯು ಸಲ್ಲಿಸಿದ ನಡಾವಳಿಗಳನ್ನು ಸಭೆಗೆ ಪ್ರಸ್ತುತಪಡಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ, ಕುಲಸಚಿವರು(ಆಡಳಿತ) ಇವರು ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ವಿಧಿಸಲಾದ ವಿವಿಧ ಪ್ರವೇಶಾತಿ ಶುಲ್ಕಗಳ ಕುರಿತು ಮತ್ತು ಕುಲಸಚಿವರು(ಮೌಲ್ಯಮಾಪನ) ಇವರು ಮೌಲ್ಯಮಾಪನ ಕಾರ್ಯಕ್ಕೆ ಸಂಬಂಧಿಸಿದ ಪ್ರಯಾಣ ಭತ್ಯೆ, ದಿನಭತ್ಯೆ, ಬಾಹ್ಯ ಪರೀಕ್ಷಕರು, ಮತ್ತು ಇತರೇ ಸಿಬ್ಬಂದಿಗಳ ಪರೀಕ್ಷಾ ಸಂಭಾವನೆಗಳ ಕುರಿತು ಮಾಹಿತಿಯನ್ನು ಸಭೆಗೆ ವಿವರಿಸಿದರು.<br>ಪರಿಶೀಲಿಸಿದ ಸಭೆಯು, ಸರ್ಕಾರದ ಏಕರೂಪ ಪ್ರವೇಶ ಶುಲ್ಕ/ಭತ್ಯೆಗಳ ಆದೇಶಾನುಸಾರ “ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದ ಪ್ರವೇಶ ಶುಲ್ಕ ಪರಿಷ್ಕರಣಾ ಹಾಗೂ ಏಕರೂಪದ ಪರೀಕ್ಷಾ ಸಂಭಾವನೆ ನಿಗದಿಪಡಿಸುವ ಸಮಿತಿ”ಯು ಸಲ್ಲಿಸಿದ ನಡಾವಳಿಗಳಿಗೆ ಸಭೆಯು ಅನುಮೋದನೆ ನೀಡಿತು. |
| 08 | 2024/09/08 | 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಯ ಪೂರ್ವಭಾವಿ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು. |
| | ತೀರ್ಮಾನ | **2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಯ ಸಿದ್ಧತೆಗೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು, ಎಲ್ಲ ಸ್ನಾತಕೋತ್ತರ ನಿಖಾಯದ ಡೀನರು, ಎಲ್ಲ ವಿಭಾಗಗಳ ಮುಖ್ಯಸ್ಥರುಗಳ ಉಪಸ್ಥಿತಿಯಲ್ಲಿ ದಿನಾಂಕ: 29.08.2024 ರಂದು ಜರುಗಿದ ಸಭೆಯಲ್ಲಿ ಈ ಕೆಳಕಾಣಿಸಿದಂತೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.**<br>**1. ವಿಶ್ವವಿದ್ಯಾಲಯದ ಎಲ್ಲ ವಿವಿಧ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಮಿತಿಯನ್ನು ಹಾಗೂ ಅರ್ಹತಾ ಮಾನದಂಡಗಳನ್ನು ಹಿಂದಿನ ಸಾಲಿನಂತೆ ಮುಂದುರೆಸುವುದು. ಆದರೆ ಭೌತಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ರಸಾಯನಶಾಸ್ತ್ರ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಕಲಿಕಾ ಆಸಕ್ತಿ ಹೆಚ್ಚಿರುವುದರಿಂದ, ಪ್ರಸಕ್ತ ಸಾಲಿನಿಂದ ಸದರಿ ವಿಭಾಗಗಳ ಪ್ರವೇಶಾತಿ ಮಿತಿಯನ್ನು ಹೆಚ್ಚಿಸುವುದು.**<br>**2. ಪ್ರಸಕ್ತ 2024–25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿರುವ ಇಂಗ್ಲೀಷ್ ವಿಭಾಗವನ್ನು ಸ್ಥಗಿತಗೊಳಿಸಿ, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಪ್ರಾರಂಭಿಸುವುದು ಹಾಗೂ ಇತಿಹಾಸ ವಿಭಾಗವನ್ನು ಮುಖ್ಯ ಆವರಣದಲ್ಲಿ ಪ್ರಾರಂಭಿಸುವುದು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿಯೂ ಮುಂದುವರೆಸುವುದು.**<br>**3. 2024–25ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪದವಿ ಪ್ರವೇಶಾತಿಯ ಸೀಟು ಹಂಚಿಕೆಯಲ್ಲಿ ಪ್ರವೇಶ ಮಿತಿ ಹೊರತುಪಡಿಸಿ, ತಲಾ 1 ಸೀಟನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಮಕ್ಕಳಿಗೆ ಕಾಯ್ದಿರಿಸುವುದು.**<br>**4. ಸ್ನಾತಕೋತ್ತರ ಕೇಂದ್ರ, ವಿಜಯಪುರಲ್ಲಿ ಹೊಸದಾಗಿ (ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಗಣಿತಶಾಸ್ತ್ರ) ಮತ್ತು ಸಂಗೊಳ್ಳಿ ರಾಯಣ್ಣ ಮಹಾವಿದ್ಯಾಲಯದಲ್ಲಿ ಸೂಕ್ಷ್ಮ ಜೀವವಿಜ್ಞಾನ(Micro-Biology) ಮತ್ತು ಜೀವರಸಾಯನಶಾಸ್ತ್ರ(Bio-Chemistry) ಕೋರ್ಸಗಳನ್ನು ಪ್ರಾರಂಭಿಸಲು ಅವಶ್ಯಕವಿರುವ ಸೌಲಭ್ಯಗಳನ್ನು ಸಿದ್ದಪಡಿಸಿಕೊಂಡು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವಂತೆ ಕ್ರಮ ಕೈಗೊಳ್ಳುವುದು.**<br>**ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 183 ಯುಡಿವಿ 2023 ದಿನಾಂಕ 13–08–2024 ರನ್ವಯ ಆರ್ಥಿಕ ಹಿತದೃಷ್ಠಿಯಿಂದ ಪ್ರಸ್ತುತ ಯಾವುದೇ ಹೊಸ ಕೋರ್ಸ್‌ಗಳನ್ನು ಸರಕಾರದ ಪೂರ್ವಾನುಮತಿ ಪಡೆಯದೆ ಪ್ರಾರಂಭಿಸದೇ ಇರಲು ಸೂಚಿಸಿರುವುದರಿಂದ ಕ್ರಮ ಸಂಖ್ಯೆ (4) ನ್ನು ಹೊರತುಪಡಿಸಿ ಉಳಿದ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರಲು ಅನುಮೋದನೆ ನೀಡಿತು.** |

| | | |
|---|---|---|
| 09 | 2024/09/09 | ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಭ್ಯಾಸ ಮಂಡಳಿಯ ನಿರ್ಣಯವನ್ನು ಅನುಮೋದಿಸುವ ಕುರಿತು. |
| ತೀರ್ಮಾನ | | **ದಿನಾಂಕ: 18.07.2024 ರಂದು ಜರುಗಿದ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಭ್ಯಾಸ ಮಂಡಳಿ ಸಮಿತಿ ಸಭೆಯ ನಡಾವಳಿಗಳನ್ನು (ಡಾ. ಭವಾನಿಶಂಕರ, ಉಪ ಗ್ರಂಥಪಾಲಕರು ಇವರ ಪ್ರಕರಣ ಹೊರತುಪಡಿಸಿ) ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಯಿತು.**<br>**ಮುಂದುವರೆದು, ವಿಭಾಗದ ಅಭ್ಯಾಸ ಮಂಡಳಿ ಮತ್ತು ಡಾಕ್ಟರಲ್ ಸಮಿತಿ ಸಭೆಗಳು ಡಾ. ಭವಾನಿಶಂಕರ, ಉಪ ಗ್ರಂಥಪಾಲಕರು, ಇವರಿಗೆ ವಿಶ್ವವಿದ್ಯಾಲಯದ ಪಿಹೆಚ್.ಡಿ. ನಿಯಮಾವಳಿ 2020 ರ ಪರಿನಿಯಮ 10.5 ರ ಪ್ರಕಾರ ಮಾರ್ಗದರ್ಶಕರಾಗಿ ಮಾನ್ಯ ಮಾಡಲು ನಿರಾಕರಿಸಿದ ವಿಷಯವನ್ನು ಚರ್ಚಿಸಿದ ಸಿಂಡಿಕೇಟ್ ಸಭೆಯು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನಿಯಮಾವಳಿಗಳನ್ವಯ ಮತ್ತೊಮ್ಮೆ ಪರಿಶೀಲಿಸಲು ವಿಭಾಗದ ಅಭ್ಯಾಸ ಮಂಡಳಿ ಸಮಿತಿಗೆ ತಿಳಿಸಲು ಸೂಚಿಸಿತು.** |
| 10 | 2024/09/10 | ಸ್ನಾತಕೋತ್ತರ ಆಡಳಿತ ನಿರ್ವಹಣಾ ಅಧ್ಯಯನ ವಿಭಾಗದ ಅಭ್ಯಾಸ ಮಂಡಳಿಯ ಸಭೆಯ ನಿರ್ಣಯವನ್ನು ಅನುಮೋದಿಸುವ ಕುರಿತು. |
| ತೀರ್ಮಾನ | | **ಸ್ನಾತಕೋತ್ತರ ಆಡಳಿತ ನಿರ್ವಹಣಾ ಅಧ್ಯಯನ ವಿಭಾಗದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪಠ್ಯಕ್ರಮದಲ್ಲಿ 3ನೇ ಸೆಮಿಸ್ಟರ್‌ನ Skill Development ಪ್ರಶ್ನೆ ಪತ್ರಿಕೆಗೆ ಸಂಬಂಧಪಟ್ಟಂತೆ ಗ್ರೇಡ್ ನೀಡುವಿಕೆ, ಅಂಕಗಳ ನಿಗದಿ, ಫಲಿತಾಂಶ ನೀಡುವಿಕೆ ಹಾಗೂ ಇತರೆ ವಿಷಯಗಳ ಕುರಿತು ದಿನಾಂಕ: 19.07.2024 ರಂದು ಜರುಗಿದ ಅಭ್ಯಾಸ ಮಂಡಳಿಯ ಸಲ್ಲಿಸಿದ ನಡಾವಳಿಗಳನ್ನು ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| 11 | 2024/09/11 | ರಾಷ್ಟ್ರೀಯ ಶಿಕ್ಷಣ ನೀತಿ-2020 ವಿನಿಯಮ ಪರಿಶೀಲನಾ ಸಭೆಯ ನಡಾವಳಿ ಕುರಿತು. |
| ತೀರ್ಮಾನ | | **ದಿನಾಂಕ: 08.08.2024 ರಂದು ಜರುಗಿದ ರಾಷ್ಟ್ರೀಯ ಶಿಕ್ಷಣ ನೀತಿ-2020 ರ ವಿನಿಯಮ ಪರಿಶೀಲನಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮೋದನೆ ನೀಡಿತು.** |
| 12 | 2024/09/12 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಂ.ಬಿ.ಎ ವಿಭಾಗದ 2023-24ನೇ ಸಾಲಿಗೆ ಪಿಎಚ್.ಡಿ. ಸಂಶೋಧನಾರ್ಥಿಗಳ ಸೀಟು ಹಂಚಿಕೆ ಕುರಿತು. |
| ತೀರ್ಮಾನ | | **ವಿಷಯವನ್ನು ಕೈಬಿಡಲಾಯಿತು.** |
| 13 | 2024/09/13 | "ವೈದ್ಯಕೀಯ ವೆಚ್ಚ ಪರಿಶೀಲನಾ ಸಮಿತಿ" ಸಭೆಯ ನಡಾವಳಿ ಕುರಿತು |
| ತೀರ್ಮಾನ | | **ದಿನಾಂಕ: 29.08.2024 ರಂದು ಜರುಗಿದ "ವೈದ್ಯಕೀಯ ವೆಚ್ಚ ಪರಿಶೀಲನಾ ಸಮಿತಿ" ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.** |
| 14 | 2024/09/14 | 12ನೇ ಘಟಿಕೋತ್ಸವದ ಗೌರವ ಡಾಕ್ಟರೇಟ್ ಪದವಿಗೆ ಅರ್ಜಿ ಸಲ್ಲಿಸಿರುವ ಸಾಧಕರ ಯಾದಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 12ನೇ ವಾರ್ಷಿಕ ಘಟಿಕೋತ್ಸವವು ಸೆಪ್ಟೆಂಬರ್/ಅಕ್ಟೋಬರ್-2024 ರ ಮಾಹೆಯಲ್ಲಿ ಸುವರ್ಣ ವಿಧಾನಸೌಧ, ಬೆಳಗಾವಿಯಲ್ಲಿ ಜರುಗಲಿದ್ದು, ಸದರಿ ಘಟಿಕೋತ್ಸವದ ಗೌರವ ಡಾಕ್ಟರೇಟ್‌ಗೆ ಅರ್ಜಿ ಸಲ್ಲಿಸಿರುವ ಸಾಧಕರ ಯಾದಿಯನ್ನು ಪರಿಶೀಲಿಸಿ ಸಭೆಯು ಗೌರವಾನ್ವಿತ ರಾಜ್ಯಪಾಲರಿಂದ ರಚಿಸಲಾದ ಪರಿಶೀಲನಾ ಸಮಿತಿಗೆ ಸಲ್ಲಿಸಲು ಸೂಚಿಸಿತು.** |
| | | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** |
| 1 | 2024/09/1 | 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್‌ಗಳಿಗೆ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಗೆ ಸಂಬಂಧಿಸಿದ ಕುರಿತು |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25 ನೇಯ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪ್ರವೇಶವನ್ನು ಮಹಾವಿದ್ಯಾಲಯಗಳಲ್ಲಿ ಪಡೆಯಲಾಗಿದೆ. ಆದರೆ ಕರ್ನಾಟಕ ಸರಕಾರದ ಕಾಲೇಜು ಶಿಕ್ಷಣ ವಿಷಯದಲ್ಲಿ ಕನಿಷ್ಠ 15 ವಿದ್ಯಾರ್ಥಿಗಳು ಇರುವುದು ಕಡ್ಡಾಯವಾಗಿರುತ್ತದೆ. ಮುಂದುವರೆದು, ಈಗಾಗಲೇ ಪ್ರವೇಶ ಪಡೆದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಒಂದು ಕೋರ್ಸ್‌ಗೆ 15 ಅಥವಾ ಐಚ್ಛಿಕ ವಿಷಯದಲ್ಲಿ ಕನಿಷ್ಠ 10 ವಿದ್ಯಾರ್ಥಿಗಳು ಇರುವ ಮಹಾವಿದ್ಯಾಲಯಗಳಿಗೆ ಮಾತ್ರ ಅನುಮೋದನೆಯನ್ನು ನೀಡಿತು.** |

| | | |
|---|---|---|
| II | 2024/09/ II | ಸ್ನಾತಕೋತ್ತರ ಕೇಂದ್ರ, ರಾಚವಿ, ವಿಜಯಪುರ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಆವರಣಗಳಲ್ಲಿ Internet Network Management Firewall with 3 year Licence ಅಳವಡಿಸಲು ಅನುಮತಿ ಕೋರಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ವಿಜಯಪುರ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಆವರಣಗಳಲ್ಲಿ ಅಂತರ್ಜಾಲ ಸೇವೆಯನ್ನು ನಿಯಂತ್ರಿಸಲು ಹಾಗೂ ರಕ್ಷಣೆಗಾಗಿ Campus Internet Network Management Firewall Device ನ್ನು ಅಳಡಿಸಲಾಗಿದೆ. ಈ ಉಪಕರಣವನ್ನು 01 ವರ್ಷದ ಪರವಾನಗಿಯೊಂದಿಗೆ ಖರೀದಿಸಿ ಅಳವಡಿಸಲಾಗಿತ್ತು. ಪ್ರಸ್ತುತ ಸದರಿ ಉಪಕರಣದ ಪರವಾನಗಿ ಮುಕ್ತಾಯವಾಗಿದ್ದು, ಇದೀಗ ಹೊಸದಾಗಿ Internet Network Management Firewall with 3 year Licence ಉಪಕರಣವನ್ನು ಖರೀದಿಸಿ ಅಳವಡಿಸಬೇಕಾಗಿರುತ್ತದೆ. ಈ ಉಪಕರಣಕ್ಕೆ ಅಂದಾಜು ರೂ. 36 ಲಕ್ಷಗಳಷ್ಟು ತಗುಲಬಹುದಾಗಿದೆ ಹಾಗೂ ಈ ಮೊತ್ತವನ್ನು 2024-25ನೇ ಸಾಲಿನ ಲೆಕ್ಕಶಿರ್ಷಿಕೆಗಳಲ್ಲಿ ಕಾಯ್ದಿರಿಸಲಾಗಿದೆ. ಇದು ಕಡತಗಳನ್ನು ಇ-ಆಫೀಸ್‌ನಲ್ಲಿ ನಿರ್ವಹಿಸಲು, ದತ್ತಾಂಶಗಳನ್ನು ಸುರಕ್ಷಿತವಾಗಿಡಲು, ವಿಶ್ವವಿದ್ಯಾಲಯದ ವೆಬ್‌ಸೈಟ್ ನಿರ್ವಹಣೆ ಹಾಗೂ ವಿಶ್ವವಿದ್ಯಾಲಯದ ಇತರೇ ಕೆಲಸ ಕಾರ್ಯಗಳಿಗೆ ಸಹಾಯಕಾರಿಯಾಗಲಿದೆ ಎಂಬ ಮಾಹಿತಿಯನ್ನು ಕುಲಸಚಿವರು ಸಭೆಗೆ ವಿವರಿಸಿದರು.<br>ದಿನನಿತ್ಯದ ಕಛೇರಿ ಕೆಲಸ ನಿರ್ವಹಿಸಲು ಅಂತರ್ಜಾಲದ ಅವಶ್ಯಕತೆ ಇರುವುದರಿಂದ Internet Network Management Firewall with 3 year Licence ಉಪಕರಣವನ್ನು ಇ-ಪ್ರೊಕ್ಯೂರಮೆಂಟ್/GeM ಮೂಲಕ ಟೆಂಡರ್ ಆಹ್ವಾನಿಸಲು ಸಭೆಯು ತೀರ್ಮಾನಿಸಿತು. |
| III | 2024/09/ III | ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕ ಸಿಬ್ಬಂದಿಗಳ ಪದೋನ್ನತಿ ಮತ್ತು ನೇರವಾಗಿ ನೇಮಕ ಮಾಡಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕ ಸಿಬ್ಬಂದಿಗಳಿಗೆ ಪ್ರಥಮ ದರ್ಜೆ ಸಹಾಯಕರೆಂದು ಪದೋನ್ನತಿ ನೀಡಲಾಗಿದೆ ಮತ್ತು ಕೆಲವು ಸಿಬ್ಬಂದಿಗಳನ್ನು ಪ್ರಥಮ ದರ್ಜೆ ಸಹಾಯಕರು, ಗಣಕಯಂತ್ರ ಸಹಾಯಕ ಮತ್ತು ಕೂಲಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಪ್ರಕ್ರಿಯೆಗಳನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಹಾಗೂ ಸಿಬ್ಬಂದಿಗಳ ಅರ್ಹತೆ, ಜೇಷ್ಠತೆಯನ್ನು ಪಾಲಿಸದೇ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆಯದೇ ಕ್ರಮಗಳನ್ನು ಕೈಗೊಳ್ಳಲಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.<br>ಈಗಾಗಲೇ ಹಣಕಾಸು ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಿತು. |
| IV | 2024/09/ IV | ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುವ ಕುರಿತು. |
| ತೀರ್ಮಾನ | | ವಿಶ್ವವಿದ್ಯಾಲಯದಿಂದ ಒಟ್ಟು 249 ಲ್ಯಾಪ್‌ಟಾಪ್‌ನ್ನು ಖರೀದಿಸಲಾಗಿದ್ದು, ಸದರಿ ಲ್ಯಾಪ್‌ಟಾಪ್‌ಗಳನ್ನು ಪ್ರಥಮ ಅಥವಾ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ವಿತರಿಸಲು ಸೂಕ್ತ ಮಾರ್ಗದರ್ಶನವನ್ನು ನೀಡಲು ಕೋರಲಾಯಿತು.<br>ಚರ್ಚಿಸಿದ ಸಭೆಯು, 2023-24 ನೇ ಶೈಕ್ಷಣಿಕ ಸಾಲಿನ ಅಂತಿಮ ವರ್ಷದ ವಿದ್ಯಾರ್ಥಿಗಳ ಅಧ್ಯಯನ ಪೂರ್ಣಗೊಳ್ಳುತ್ತಿರುವ ಕಾರಣ, ಪ್ರಥಮ ವರ್ಷದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲವಾಗುವ ಹಿತದೃಷ್ಠಿಯಿಂದ ಸ್ನಾತಕೋತ್ತರ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ಲ್ಯಾಪ್‌ಟಾಪ್ ವಿತರಿಸಲು ಸಭೆಯು ಸೂಚಿಸಿತು. ಆದರೆ, ಕೆಲವು ವಿದ್ಯಾರ್ಥಿಗಳು ಪದವಿ ಪಡೆಯುವ ಅವಧಿಯಲ್ಲಿ ಈಗಾಗಲೇ ಸರಕಾರದಿಂದ ಮಂಜೂರಾದ ಲ್ಯಾಪ್‌ಟಾಪ್ ಪಡೆದುಕೊಂಡಿರುತ್ತಾರೆ. ಕಾರಣ, ಪದವಿಯಲ್ಲಿ ಪಡೆಯದೇ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾಲಯದಿಂದ ಲ್ಯಾಪ್‌ಟಾಪ್‌ಗಳನ್ನು ನೀಡಲು ತೀರ್ಮಾನಿಸಿತು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.